ಆ. ಕಳೆದ ಮೂರು ವರ್ಷಗಳಿಗೆ ವಿವಿಧ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಕ್ಕೆ ನಿಗದಿಗೊಳಿಸಿದ, ಬಿಡುಗಡೆಯಾದ ಹಾಗೂ ಖರ್ಚಾದ ರಾಜ್ಯ ಸರ್ಕಾರದ ಪಾಲಿನ ಹಣ ಎಷ್ಟು?

ಇ. ರಾಜ್ಯ ಸರ್ಕಾರ ತನ್ನ ಪಾಲಿನ ಶೇಕಡ 25ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಹಣವನ್ನು ನೀಡುವಲ್ಲಿ ವಿಫಲವಾದ್ದರಿಂದ ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ಕಟಾವುಗೊಳಿಸಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೆ? ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮಗಳಿಗೆ ಕಳೆದ ಮೂರು ವರ್ಷಗಳಲ್ಲಿ (1999-2000, 2000-01 ಮತ್ತು 2001-02) ನಿಗದಿಗೊಳಿಸಿದ ಹಣ ರೂ. 1819.37 ಕೋಟಿ, ಬಿಡುಗಡೆಯಾದ ಹಣ ರೂ. 1570.36 ಕೋಟಿ ಹಾಗೂ ಖರ್ಚಾದ ಹಣ ರೂ. 1477.22 ಕೋಟಿ.

ಆ. ರಾಜ್ಯ ಸರ್ಕಾರವು ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಿಗೆ ಕಳೆದ ಮೂರು ವರ್ಷಗಳಲ್ಲಿ ತನ್ನ ಪಾಲಿನ ನಿಗದಿಗೊಳಿಸಿದ ಹಣ ರೂ. 306.52 ಕೋಟಿ, ಬಿಡುಗಡೆಯಾದ ಹಣ ರೂ. 278.45 ಕೋಟಿ ಹಾಗೂ ಖರ್ಚಾದ ಹಣ ರೂ. 289.24 ಕೋಟಿ.

ಇ. ಇಲ್ಲ.

ಕೇಂದ್ರ ಸರ್ಕಾರವು ಅನುದಾನವನ್ನು ಬಿಡುಗಡೆಗೊಳಿಸಿದ ತಕ್ಷಣ ರಾಜ್ಯ ಸರ್ಕಾರವು ಆಯಾ ಕಾರ್ಯಕ್ರಮಗಳ ಮಾರ್ಗಸೂಚಿ ಪ್ರಕಾರ ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

ಅರ್ಹ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಸಕ್ರಮಗೊಳಿಸುವುದು

1463(1548) ಶ್ರೀ ಚನ್ನಿಗಪ್ಪ ಸಿ. (ಕೊರಟಿಗೆರೆ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸರ್ವೋಚ್ಚ ನ್ಯಾಯಾಲಯ ಮತ್ತು ಸರ್ಕಾರದ ಆದೇಶದನ್ವಯ ಕಾನೂನು ಇಲಾಖೆ ಹಾಗೂ ಹಣಕಾಸು ಇಲಾಖೆಗಳು ಅರ್ಹ ಅರೆಕಾಲಿಕ ಉಪನ್ಯಾಸಕರ (ಎನ್.ಇ.ಟಿ, ಎಸ್.ಎಲ್.ಇ.ಟಿ) ಪಾಸಾದವರ ಸೇವೆಯನ್ನು ಸಕ್ರಮಗೊಳಿಸಲು ಅನುಮತಿ ನೀಡಿದ್ದಾಗ್ಯೂ ಸಹ ಅವರಿಗೆ ಆದೇಶ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಇವರಿಗೆ ಆದೇಶ ಪತ್ರವನ್ನು ಯಾವಾಗ ನೀಡಲಾಗುವುದು ಮತ್ತು ಇದಕ್ಕೆ ಕಾಲಮಿತಿ ಏನಾದರೂ ಇದೆಯೇ;

3. ಅರ್ಹ ಅರೆಕಾಲಿಕ ಉಪನ್ಯಾಸಕರಿಗೆ ಆದೇಶ ಪತ್ರ ನೀಡಿ ಉಳಿದ ಉಪನ್ಯಾಸಕರ ಸೇವೆಯನ್ನು ಖಾಯಂ ಮಾಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು ಹಾಗೂ ಇವರುಗಳಿಗೆ ಅನುಕೂಲ ಮಾಡಿಕೊಡುವುದು ಯಾವಾಗ?

ಡಾ. ಎ.ಬಿ. ಮಾಲಕರೆಡ್ಡಿ (ಉನ್ನತ ಶಿಕ್ಷಣ ಸಚಿವರು)

1. ಹೌದು

2. ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಆದರೆ, ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ.

3. ಅರೆಕಾಲಿಕ ಉಪನ್ಯಾಸಕರುಗಳ ಸೇವೆಯನ್ನು ಸಕ್ರಮಗೊಳಿಸಲು ರೂಪಿಸಲಾಗಿರುವ ನಿಯಮಗಳು, ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪು, ಕಾನೂನು ಇಲಾಖೆ ಹಾಗೂ ಆರ್ಥಿಕ ಇಲಾಖೆಗಳು ನೀಡಿರುವ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಅಂತಿಮ ಪರಿಹಾರ ಕಂಡುಕೊಳ್ಳಲು ವಿಷಯ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಕಲಾವಿದರಿಗೆ ಮಾಶಾಸನ

1465(1550) ಶ್ರೀ ಸಿ. ಚನ್ನಿಗಪ್ಪ (ಕೊರಟಗೇರೆ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ ಎಷ್ಟು. ಈಗ ನೀಡುತ್ತಿರುವ ಗೌರವ ಸಂಭಾವನೆ ಎಷ್ಟು?

ಆ. ಯಾವ ಯಾವ ಕಲಾವಿದರಿಗೆ ಸರ್ಕಾರದಿಂದ ಮಾಸಾಶಾನ ಮಂಜೂರು ಮಾಡಲಾಗುವುದು.

ಇ. ಗ್ರಾಮೀಣ ಭಾಗದ ಪೌರಾಣಿಕ ನಾಟಕಗಳ ಪ್ರದರ್ಶನಕ್ಕೆ ಸರ್ಕಾರವು ಒದಗಿಸುತ್ತಿರುವ ಸಹಾಯಧನ ಎಷ್ಟು?

ಈ. ಕಲಾವಿದರ ಮಾಸಾಶನವನ್ನು ಹೆಚ್ಚಿಸುವ ಯೋಜನೆಯು ಸರ್ಕಾರದ ಮುಂದಿದೆಯೇ? ಹಾಗಿದ್ದರೆ ಯಾವಾಗ ಎಷ್ಟು ಸಂಭಾವನೆಯನ್ನು ಹೆಚ್ಚಿಗೆ ಗೊಳಿಸಲಾಗುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು)

ಅ. ಮಾಸಾಶನ ಪಡೆಯುತ್ತಿರುವ ಕಾವಿದರ ಸಂಖ್ಯೆ: 6721

ಮಾಸಿಕ ತಲಾ ರೂ. 500 ಮಾಸಾಶನ ನೀಡಲಾಗುತ್ತಿದೆ.

ಆ. ಸಂಗೀತ, ನೃತ್ಯ, ಸಾಹಿತ್ಯ ರಂಗಭೂಮಿ ಲಲಿತಕಲೆ, ಶಿಲ್ಪಕಲೆ, ಉರ್ದುಸಾಹಿತ್ಯ, ಜಾನಪದ ಮತ್ತು ಯಕ್ಷಗಾನ ಕಲೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಕಷ್ಟಪರಿಸ್ಥಿತಿಯಲ್ಲಿದ್ದು ಅರ್ಜಿ ಸಲ್ಲಿಸಿದ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲಾಗುತ್ತಿದೆ.

ಇ. ರೂ. 5,000 ಸಂಭಾವನೆ ಪ್ರತಿ ಕಾರ್ಯ ಕ್ರಮದ ಪ್ರದರ್ಶನಕ್ಕೆ ನೀಡುತ್ತಿದೆ.

2002-03ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ರೂ. 5.00 ಲಕ್ಷ ಇಲಾಖೆಯ ಆಯವ್ಯಯದಲ್ಲಿ ಒದಗಿಸಿದೆ.

ಈ. 1.11.02 ರಿಂದ ಮಾಸಾಶನವನ್ನು ರೂ. 250.00 ರಿಂದ 500.00 ಗಳಿಗೆ ಹೆಚ್ಚಿಸಲಾಗಿದೆ.

ಚಿಂತಾಮಣಿ ತಾಲ್ಲೂಕಿನಲ್ಲಿ ಬಡವರಿಗೆ ಮಂಜೂರಾಗಿರುವ ನಿವೇಶನಗಳಿಗೆ ಹಕ್ಕುಪತ್ರ ಹಂಚಿಕೆ

1466(1530) ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಂತಾಮಣಿ ತಾಲ್ಲೂಕು ಅಂಬಾಜಿದುರ್ಗ ಹೋಬಳಿ ಉಪ್ಪಾರಪೇಟೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಉರಗಮಾಕಲಹಳ್ಳಿ ಗ್ರಾಮದ ಸರ್ವೆ ನಂ 1 ರಲ್ಲಿ ಒಂದು ಎಕರೆ 22 ಗುಂಟೆ ಗೋಮಾಳ ಜಮೀನನ್ನು ನಿವೇಶನಗಳಿಗೋಸ್ಕರ ದಿನಾಂಕ: 5.7.1979 ರಲ್ಲಿ ಚಿಕ್ಕಬಳ್ಳಾಪುರ ಉಪವಿಭಾಗ ಸಹಾಯಕ ಆಯುಕ್ತರು, ಬಿ.ಡಿ.ಓ. ಅಧಿಕಾರಿ, ಚಿಂತಾಮಣಿ ರವರಿಗೆ ಮಂಜೂರು ಮಾಡಿರುವುದು ನಿಜವೇ?